ಜಿಕೆವಿಕೆ: ಹಸಿರು ಆರ್ಗ್ಯಾನಿಕ್ ಸಂಸ್ಥೆಯಿಂದ ಕೃಷಿ ಉತ್ತೇಜಿಸಲು ವಿವಿಧ ಶಾಲಾ ಮಕ್ಕಳಿಗೆ ಯಂಗ್ ಹಾರ್ವೆಸ್ಟರ್ ಕಾರ್ಯಕ್ರಮ. ಅತಿಥಿಗಳು: ಐಶ್ವರ್ಯಾ ಹೆಗ್ಡೆ, ಚಿತ್ರ ಕಲಾಪರಿಷತ್ತು ಅಧ್ಯಕ್ಷ ಬಿ.ಎಲ್.ಶಂಕರ್, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ಕಾಫಿ ಮಂಡಳಿ ಅಧ್ಯಕ್ಷ ಎಂ.ಜಿ. ದಿನೇಶ್. ಸ್ಥಳ: ಕುವೆಂಪು ಸಭಾಂಗಣ, ಜಿಕೆವಿಕೆ. ಬೆ.10ಕ್ಕೆ.

12-08-2025
Udayavani Pg.04

ಸಮಸ್ಯೆ ಬಗೆಹರಿಸುವ ಸಂಶೋಧನೆ ಬಗ್ಗೆ ಆದ್ಯತೆ ಅಗತ್ಯ: ಅಗರ್ವಾಲ್

ಜಿಕೆವಿಕೆಯಲ್ಲಿ ಸ್ನಾತಕೋತ್ತರ ವಿಜ್ಞಾನ ಸಪ್ತಾಹ ಕಾರ್ಯಕ್ರಮ



ನಗರದ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ಸ್ನಾತಕೋತ್ತರ ವಿಜ್ಞಾನ ಸಪ್ತಾಹವನ್ನು ದೆಹಲಿಯ ಭಾರತೀಯ ಅನುಸಂಧಾನ ಪರಿಷತ್‌ನ ವಿಶ್ರಾಂತ ಉಪ ಮಹಾ ನಿರ್ದೇಶಕರಾದ ಡಾ.ಆರ್.ಸಿ. ಅಗರ್ವಾಲ್ ಉದ್ಘಾಟಿಸಿದರು. ವಿವಿ ಕುಲಪತಿ ಡಾ.ಎಸ್.ವಿ.ಸುರೇಶ ಮತ್ತಿತರರು ಹಾಜರಿದ್ದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಯುವ ಜನತೆ ಸಂಶೋಧನೆಗೆ ಒತ್ತು ನೀಡಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಬೇಕು ಎಂದುದೆಹಲಿಯಭಾರತೀಯಅನುಸಂಧಾನ ಪರಿಷತ್‌ನ ವಿಶ್ರಾಂತ ಉಪ ಮಹಾ ನಿರ್ದೇಶಕ ಡಾ.ಆರ್.ಸಿ.ಅಗರ್ವಾಲ್ ಕರೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ದಿಂದಹೆಬ್ಬಾಳದಜಿಕೆವಿಕೆಯಲ್ಲಿಸೋಮವಾರ ಆಯೋಜಿಸಿದ್ದ ಸ್ನಾತಕೋತ್ತರ ವಿಜ್ಞಾನ ಸಪ್ತಾಹವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಎಂದರೆ ಕೇವಲ ಬೆಳೆ ಬೆಳೆಸುವುದು ಮಾತ್ರವಲ್ಲ, ಅವಕಾಶಗಳನ್ನೂ ಬೆಳೆಸುವುದು. ಇಂದಿನ ಸಂಶೋಧನೆಗಳು ಭವಿಷ್ಯದ ಅಭಿವೃದ್ಧಿಗೆ ಬುನಾದಿಯಾಗಿವೆ. ಆದ್ದರಿಂದ ಯುವ ಜನತೆ ಸಂಶೋಧನೆಗೆ ಒತ್ತು ನೀಡಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಗಮನಹರಿಸಬೇಕು. ವಿಜ್ಞಾನ ಸಪ್ತಾಹವು ಸಂಶೋಧನೆಯ ಮೂಲಭೂತ ಹಾಗೂ ಅನ್ವಯಿಕ ಆಯಾಮಗಳೆರಡನ್ನೂ ಪರಿಚಯಿಸುತ್ತದೆ ಎಂದು ವಿವರಿಸಿದರು.

ವಿವಿ ಕುಲಪತಿ ಡಾ.ಎಸ್.ವಿ.ಸುರೇಶ, ಕೀಟಶಾಸ್ತ್ರ ವಿಭಾಗದ ನಿವೃತ್ತ ವಿಜ್ಞಾನಿ ಡಾ.ವಿ.ವಿ.ಬೆಳವಾಡಿ, ಸ್ನಾತಕೋತ್ತರ ವಿಭಾಗದಮುಖ್ಯಸ್ಥಡಾ.ಕೆ.ಸಿ.ನಾರಾಯಣಸ್ವಾಮಿ, ಕೃಷಿ ವಿಭಾಗದ ಮುಖ್ಯಸ್ಥ ಡಾ.ಎಂ.ಬಿ. ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

12-08-2025
Kannadaprabha Pg.03

ಶ್ರೀಹುಲುಕುಡಿ ಬೆಟ್ಟದಲ್ಲಿ ಜಿಕೆವಿಕೆ ಕೃಷಿ ವಿದ್ಯಾರ್ಥಿಗಳ ಶ್ರಮದಾನ

ನಿಸ್ವಾರ್ಥ ಸೇವೆಯೇ ಸಾಧನೆಗೆ ಮೆಟ್ಟಿಲು



• **ದೊಡ್ಡಬಳ್ಳಾಪುರ:**ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಅವಧಿಯಲ್ಲಿ ಸಮಾಜಮುಖಿ ಕೆಲಸಗಳತ್ತ ಗಮನ ಹರಿಸಿ ನಿಸ್ವಾರ್ಥ ಸೇವೆಯಲ್ಲಿ ತೊಡಗಬೇಕೆಂದು ಸಂಪನ್ಮೂಲ ವ್ಯಕ್ತಿ ನಾಗರಾಜು ಅಶ್ವತ್ಥ್ ಹೇಳಿದರು.

ತಾಲೂಕಿನ ಶ್ರೀಹುಲುಕುಡಿ ವೀರಭದ್ರೇಶ್ವರ ಬೆಟ್ಟದಲ್ಲಿ ಜಿಕೆವಿಕೆ ಕೃಷಿ ಇಂಜಿನಿಯರಿಂಗ್ ವಿದ್ಯಾರ್ಥಿಗಳ ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಮಾತನಾಡಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಸಾಮಾಜಿಕ ಕೆಲಸದಲ್ಲಿ ಸದಾ ಪ್ರವೃತ್ತರಾಗಿದ್ದಾರೆಂದರು.

ಸ್ವಚ್ಛತೆಯಲ್ಲಿ ವಿಶೇಷ ಆಸಕ್ತಿ ಹೊಂದಿರುವರು. ಮಹಾತ್ಮಗಾಂಧಿ ಚಿಂತನೆಯಿಂದ ಪ್ರಾರಂಭವಾದ ಎನ್‌ಎಸ್‌ಎಸ್ ಇಂದು ರಾಷ್ಟ್ರವ್ಯಾಪಿ ಶಿಸ್ತುಬದ್ಧವಾಗಿ ಉತ್ತಮ ಕೆಲಸ ಮಾಡುತ್ತಿದೆ. ಇಂತಹ ಸೇವೆಯಲ್ಲಿ ಕೈ ಜೋಡಿಸಿರುವ ವಿದ್ಯಾರ್ಥಿಗಳ ಕನಸು ದೊಡ್ಡದಾಗಿರ ಬೇಕೆಂದು ಸಲಹೆ ನೀಡಿದರು. ದೊಡ್ಡ ದೊಡ್ಡ ಹುದ್ದೆಗಳ ಅಲಂಕರಿಸಲು ಯುಪಿಎಸ್‌ಸಿಯಂತಹ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಬೇಕು. ಕಠಿಣ ಪರಿಶ್ರಮದಿಂದ ಇದೆಲ್ಲವೂ ಸಾಧ್ಯ. ಸ್ಪರ್ಧಾತ್ಮಕ ಪರೀಕ್ಷೆಗಳೊಂದಿಗೆ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣವಿರಬೇಕೆಂದರು. ರಾಜಕೀಯ ಎಂದರೆ ನಿರಾಸಕ್ತಿ ತೋರುವ ಮನೋಭಾವ ಬದಲಾಗಬೇಕು. ದೇಶದ ಪ್ರಗತಿಯಲ್ಲಿ ಜನಪ್ರತಿನಿಧಿಗಳು ಪ್ರಮುಖಪಾತ್ರ ವಹಿಸುವರು. ಹೀಗಾಗಿ, ರಾಜಕೀಯ ಕ್ಷೇತ್ರದ ಕಡೆ ವಿದ್ಯಾರ್ಥಿಗಳು ಗಮನ ಹರಿಸಬೇಕು. ಜತೆಗೆ, ಉನ್ನತ ಸಂಸ್ಥೆಗಳು ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುತ್ತವೆ. ಅಂತಹ ಸಂಸ್ಥೆಗಳ ಕಟ್ಟುವಿಕೆಯ ಆಸಕ್ತಿ ಮೂಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಕಾಯಕ ನಿಷ್ಠೆ, ಒಳ್ಳೆಯ ಕೆಲಸದಲ್ಲಿ ದೇವರನ್ನು ಕಾಣಬೇಕು. ಸದಾ ಸಮಾಜಕ್ಕೆ ಒಳಿತನ್ನು ಬಯಸುವ ಚಿಂತನೆ ಇರಬೇಕು. ಮಾನವೀಯ ಮೌಲ್ಯ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಉತ್ತಮ ವ್ಯಕ್ತಿತ್ವ ಕಾಣಲು ಸಾಧ್ಯ. ವಿಶೇಷವಾಗಿ ಯಾವುದೇ ವ್ಯಕ್ತಿ ಅಥವಾ ವಿಷಯಗಳ ಬಗ್ಗೆ ತಿಳಿಯುವ, ನೋಡುವ ಆಯಾಮ ಸರಿಯಾಗಿರಬೇಕು. ಆಯಾಮಗಳು ನಾವು ನಿರ್ಧರಿಸುವ ಎಷ್ಟೋ ವಿಷಯಗಳ ಮೇಲೆ ಪ್ರಭಾವ ಬೀರುತ್ತದೆ ಎಂದರು.

ಸಹಾಯಕ ಪ್ರಾಧ್ಯಾಪಕ ಡಾ.ಜಯಶ್ರೀ ಜೆ.ಸಿ. ಮಾತನಾಡಿ, ಎನ್‌ಎಸ್‌ಎಸ್ ಸಮಾಜ ಸೇವೆಯನ್ನು ತಿಳಿಯುವ ವೇದಿಕೆಯಾಗಿದೆ. ವಿಶೇಷ ಶಿಬಿರಗಳು ವಿದ್ಯಾರ್ಥಿಗಳಿಗೆ ಸ್ವಯಂ ಸೇವಾ ಗುಣ ಬೆಳೆಸುತ್ತದೆ. ದೇಶವನ್ನು ಸ್ವಚ್ಛತೆಯೆಡೆಗೆಕೊಂಡೊಯ್ಯುವಪರಿಕಲ್ಪನೆ ವಿದ್ಯಾರ್ಥಿಗಳಿಗೆ ಮೂಡಿಸುತ್ತದೆ. ಹಾಗೆಯೇ, ಸಾರ್ವಜನಿಕ ಸೇವೆ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ಅಭಿವೃದ್ಧಿ ಹೊಂದುತ್ತದೆ. ಲೋಕಸೇವೆಯೊಂದಿಗೆ ರಾಷ್ಟ್ರನಿರ್ಮಾಣದ ಅನುಭವ ನೀಡುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಲ್ಯಾಬ್ ಅಸಿಸ್ಟೆಂಟ್ ಮುನಿರಾಜು, ಕಿರಿಯ ಅಭಿಯಂತರ ಶಶಿಧರ್, ಉಪನ್ಯಾಸಕ ರವಿಗೋರಘಟ್ಟ, ವಿದ್ಯಾರ್ಥಿಗಳಿದ್ದರು.

12-08-2025
Hosadigantha Pg.07

ಜಿಕೆವಿಕೆಯಲ್ಲಿ ಸ್ನಾತಕೋತ್ತರ ವಿಜ್ಞಾನ ಸಪ್ತಾಹ –2025

ಸಂಶೋಧನೆ ಕೃಷಿ ಭವಿಷ್ಯಕ್ಕೆ ಬುನಾದಿ



•ಬೆಂಗಳೂರು: ಕೃಷಿಎಂದರೆಕೇವಲಬೆಳೆಬೆಳೆಸುವುದು ಮಾತ್ರವಲ್ಲ, ಅವಕಾಶ ಬಳಸಿಕೊಳ್ಳುವುದು ಹಾಗೂ ಇಂದಿನ ಸಂಶೋಧನೆಗಳು ಭವಿಷ್ಯದ ಅಭಿವೃದ್ಧಿಗೆ ಬುನಾದಿಯಾಗಿವೆ ಎಂದು ಭಾರತೀಯ ಅನುಸಂಧಾನ ಪರಿಷತ್‌ನ ಉಪ ಮಹಾನಿರ್ದೇಶಕ ಡಾ.ಆರ್.ಸಿ.ಅಗರ್ವಾಲ್ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆಯಲ್ಲಿ ಆಯೋಜಿ ಸಲಾಗಿದ್ದ ಸ್ನಾತಕೋತ್ತರ ವಿಜ್ಞಾನ ಸಪ್ತಾಹ – 2025 ರನ್ನು ಉದ್ಘಾಟಿಸಿ ಮಾತನಾಡಿ, ಇಂದಿನ ಯುವ ಜನತೆ ಸಂಶೋಧನೆಗಳ ಬಗ್ಗೆ ಹೆಚ್ಚು ಒತ್ತು ನೀಡಿ, ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ಹರಿಸಬೇಕೆಂದರು.

ವಿಜ್ಞಾನ ಸಪ್ತಾಹವು ಸಂಶೋಧನೆಯ ಮೂಲ ಹಾಗೂ ಅನ್ವಯಿಕ ಆಯಾಮಗಳೆ ರಡನ್ನೂ ಪರಿಚಯಿ ಸುವುದರ ಜತೆಗೆ ಪರಿಣಾಮಕಾರಿ ಸಂವಹನ ಕೌಶಲತೆಯನ್ನು ಸಾಧಿಸಲು ನೆರವಾಗುತ್ತದೆ ಎಂದು ಅವರು ತಿಳಿಸಿದರು.

ಕುಲಪತಿ ಡಾ. ಎಸ್.ವಿ.ಸುರೇಶ ಮಾತನಾಡಿ, ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ 2015 ರಿಂದ ಪ್ರಾರಂಭವಾದ ಈ ವಿಜ್ಞಾನ ಸಪ್ತಾಹ ಕಾರ್ಯಕ್ರಮವು ಇಂದು ಕೃಷಿ ವಿವಿ ಬೆಂಗಳೂರಿನ ಪ್ರತಿಷ್ಠಿತ ವಾರ್ಷಿಕ ಕಾರ್ಯಕ್ರಮವಾಗಿ ಬೆಳೆದಿದೆಂದರು.

ಇದು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತಮ್ಮ ಸಂಶೋಧನಾ ಪ್ರಯತ್ನಗಳು ಮತ್ತು ಆವಿಷ್ಕಾರವನ್ನು ಪ್ರಸ್ತುತಪಡಿಸಲು ಒಂದು ವಿಶಿಷ್ಟ ವೇದಿಕೆಯನ್ನು ಒದಗಿಸಿದೆ. ಈ ವಿಚಾರ ಸಂಕಿರಣವು ಕೃಷಿ ವಿಜ್ಞಾನದ ತಿಳಿವಳಿಕೆಯನ್ನು ಹೆಚ್ಚಿಸುವುದರ ಜತೆಗೆ ಸಂಶೋಧನಾ ಉತ್ಕೃಷ್ಟತೆಯನ್ನು ಪ್ರೇರೇಪಿಸುವ ಹಾಗೂ ಪೋಷಿಸುವ ಗುರಿ ಹೊಂದಿದೆ ಎಂದರು.

12-08-2025
Hosadigantha Pg.07

ವೈಜ್ಞಾನಿಕ ಕೃಷಿಯಿಂದ ದಾಳಿಂಬೆಗೆ ಆದಾಯ



• ಆರಸೀಕೆರೆ: ದಾಳಿಂಬೆ ಬೆಳೆಯಲ್ಲಿ ನಿರೀಕ್ಷಿತ ಆದಾಯ ಗಳಿಸಲು ಬಯಸುವ ಬೆಳೆಗಾರರು ಆಧುನಿಕ ತಂತ್ರಜ್ಞಾನದ ಜತೆಗೆ ಸುಧಾರಿತ ಕ್ರಮಗಳನ್ನು ಅನುಸರಿಸಿದಲ್ಲಿ, ಹೆಚ್ಚಿನ ಆದಾಯ ಗಳಿಸಲು ಸಾಧ್ಯವಿದೆ ಎಂದು ತಾಲೂಕು ತೋಟಗಾರಿಕಾ ಸಹಾಯಕ ನಿರ್ದೇಶಕಿ ಸೀಮಾ ಹೇಳಿದರು. ತಾಲೂಕಿನ ಕೊಮ್ಮಾರಘಟ್ಟ ಗ್ರಾಮದಲ್ಲಿ ಕೃಷಿಕ ಚಿದಾನಂದ್ ದಾಳಿಂಬೆ ತೋಟಕ್ಕೆ ಇತ್ತೀಚೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದರು.ಕಳೆದ ಕೆಲ ದಿನಗಳಿಂದ ಮೋಡ ಮುಸುಕಿದ ವಾತಾವರಣ ಹಾಗೂ ಮಳೆ ಹಿನ್ನಲೆಯಲ್ಲಿ ಬೆಳೆಗೆ ಅಂತ್ರಗ್ನೋಸ್,ಫೈಟಾಪ್ತರ, ಸ್ಯಾಬ್ ಬ್ಯಾಕ್ಟೀರಿಯಲ್ ಬ್ಲೈಟ್, ದುಂಡಾಣು ಸೇರಿದಂತೆ ಹಲವು ರೋಗಗಳು ಕಾಡುವ ಸಾಧ್ಯತೆ ಹೆಚ್ಚಿದ್ದು ಬೆಳೆ ನಷ್ಟವಾಗುವ ಸಾಧ್ಯತೆ ಹೆಚ್ಚಿದೆಂದರು. ಹವಾಮಾನ ವೈಪರಿತ್ಯದ ನಡುವೆಯೂ ಬೆಳೆಗಾರರು ಶಿಲೀಂಧ್ರ ಹಾಗೂ ರೋಗನಾಶಕ ಔಷಧಗಳನ್ನು ಸಕಾಲಕ್ಕೆ ಸಿಂಪಡಿಸುವುದು ಸೂಕ್ತ. ನಿರ್ಲಕ್ಷ್ಯ ತೋರಿದಲ್ಲಿ ದಾಳಿಂಬೆಯಿಂದ ನಿರೀಕ್ಷಿತ ಲಾಭಗಳಿಸಲು ಅಡಚಣೆ ಎದುರಾಗಲಿದೆ. ಹೆಚ್ಚಿನ ಮಾಹಿತಿಗೆ ತೋಟಗಾರಿಕಾ ಇಲಾಖೆ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ. ದಾಳಿಂಬೆಯಲ್ಲಿ ಪರಿಣತಿ ಪಡೆದವರನ್ನು ಸಂಪರ್ಕಿಸಿದರೆ ಪ್ರಯೋಜನವಾಗಲಿದೆ. ಆಧುನಿಕ ತಂತ್ರಜ್ಞಾನದ ಜತೆಗೆ ಸುಧಾರಿತ ಕ್ರಮಗಳನ್ನು ಅನುಸರಿಸಿದಲ್ಲಿ ಲಾಭ ದೊರೆಯಲಿದೆ ಎಂದು ತಿಳಿಸಿದರು. ಸಮರ್ಥ ರೈತ ಮಿತ್ರ ಆಗ್ರೋಏಜೆನ್ಸಿ ಮುಖ್ಯಸ್ಥ ಆಕ್ಷಯ್ ಚಿಂದನ್ ಮಾತನಾಡಿ,ದಾಳಿಂಬೆ ಬೆಳೆಗಾರರು ಕ್ರಮಬದ್ಧವಾಗಿ ಕೃಷಿಯಲ್ಲಿ ತೊಡಗಿಸಿಕೊಂಡರೆ ಹೆಚ್ಚಿನ ಲಾಭಗಳಿಸಲು ಸಾಧ್ಯವಿದೆ ಎಂಬುದನ್ನು ಬೆಳೆಗಾರ ಚಿದಾನಂದ್ ಸಾಬೀತು ಮಾಡಿದ್ದಾರೆ. ಇದರ ನಿದರ್ಶನ ಎನ್ನುವಂತೆ ಪ್ರಸಕ್ತ ಸಾಲಿನಲ್ಲಿ ಅಂದಾಜು 20 ಟನ್ ಫಸಲು ಪಡೆದಿದ್ದಾರೆ. ಪ್ರತಿ ಕೆಜಿ 180ರಿಂದ 200 ರೂಗಳಿಗೆ ಮಾರಾಟ ಮಾಡಿ ಲಾಭ ಕಂಡುಕೊಂಡಿದ್ದಾರೆ ಎಂದರು. ತೋಟಗಾರಿಕಾ ಇಲಾಖೆಯ ರಂಗನಾಥ್, ಚಿದಾನಂದ್ ಇನ್ನಿತರರಿದ್ದರು.

12-08-2025
Hosadigantha Pg.09

ಕಬ್ಬು ಕೃಷಿಕರು ಅನುಭವಿಸುತ್ತಿರುವ ಅಸ್ವಾಭಾವಿಕ ಹಾನಿಗಳು

ಅಲ್ಪಾವಧಿ ತಳಿಯ ಕಬ್ಬನ್ನು ನಾಟಿ ಮಾಡುವುದರಿಂದ ಕಾರ್ಖಾನೆಗೆ ಹೆಚ್ಚು ಆದಾಯವಾಗುತ್ತದೆ, ಇದರಿಂದ ರೈತರಿಗೂ ಹೆಚ್ಚಿನ ಪಾಲು ಲಭಿಸುತ್ತದೆ. ಅಲ್ಪಾವಧಿ ಕಬ್ಬು ತಳಿಗಳು ವಿಶೇಷವಾಗಿ ಸುಂಕ (ಮುಳ್ಳು)ಗಳನ್ನು ಹೊಂದಿರುವುದರಿಂದ ರೈತರು ನಾಟಿ ಮಾಡಲು ಹಿಂಜರಿಯುತ್ತಾರೆ. ಸದ್ಯ ಯಾಂತ್ರೀಕೃತ ಕಟಾವು ಸಾಧ್ಯವಿರುವುದರಿಂದ ಅಲ್ಪಾವಧಿ ತಳಿಗಳ ಕಟಾವಿಗೆ ಸಮಸ್ಯೆಯಾಗುವುದಿಲ್ಲ.

ಕಬ್ಬು ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲೇ 2ನೇ ಸ್ಥಾನದಲ್ಲಿದ್ದರೆ, ಸಕ್ಕರೆ ಉತ್ಪಾದನೆ ಹಾಗೂ ಬಳಕೆಯಲ್ಲಿ ಮೊದಲ ಸ್ಥಾನದಲ್ಲಿದೆ. ಕಬ್ಬು ಬೆಳೆಯು ಭಾರತದ ಆರ್ಥವ್ಯವಸ್ಥೆಗೆ ವಿವಿಧ ತೆರಿಗೆಗಳ ಮೂಲಕ ಬಹುದೊಡ್ಡ ಕೊಡುಗೆಯನ್ನು ನೀಡಿದೆ. ಅಂತೆಯೇ ನೂರಾರು ವರ್ಷಗಳ ಇತಿಹಾಸವಿರುವ ಸಕ್ಕರೆ ಉದ್ಯಮದ ಕಾರ್ಯನೀತಿಯು ಇಂದಿಗೂ ಸರಕಾರದ ನಿಯಂತ್ರಣದಲ್ಲಿದೆ. 'ಸೋಮಾರಿ ಬೆಳೆ' ಎನಿಸಿರುವ ಕಬ್ಬು ಪ್ರತಿವರ್ಷ ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಿದೆ.

ಕ್ರಿ.ಶ. 2000ಕ್ಕಿಂತ ಪೂರ್ವದಲ್ಲಿ ಕಾರ್ಖಾನೆಗಳಿಗೆ ಕಬ್ಬು ಪೂರೈಸುವುದೆಂದರೆ ರೈತರಿಗೆ ದೊಡ್ಡ ಸಾಹಸವಾಗಿತ್ತು. ಮಂತ್ರಿ–ಮಹೋದಯರ ಶಿಫಾರಸು ಪತ್ರಗಳಿಗೂ ಮನ್ನಣೆ ಸಿಗುತ್ತಿರಲಿಲ್ಲ. ಕಡಿಮೆ ಸಾಮರ್ಥ್ಯದ ಮತ್ತು ಬೆರಳೆಣಿಕೆಯಷ್ಟಿದ್ದ ಅಂದಿನ ಕಾರ್ಖಾನೆಗಳಿಗೆ ಬೆಳೆದ ಕಬ್ಬನ್ನು ಸಂಪೂರ್ಣವಾಗಿ ಅರೆಯಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಕಬ್ಬು ಬೆಳೆಗಾರರು ಅದರಲ್ಲೂ ಉತ್ತರ ಕರ್ನಾಟಕ ಮತ್ತು ಪಶ್ಚಿಮ ಮಹಾರಾಷ್ಟ್ರ ಭಾಗದವರು ಅತಿಯಾಗಿ ಹಾನಿಗೀಡಾದರು. ಹಿಂದೆ ಅವರಿಗೆ ಆದ ನಷ್ಟಗಳು ಹೀಗಿವೆ:

- ಕಬ್ಬು ಕಟಾವು ಮಾಡಲು ಸರಾಸರಿ ಒಂದೂವರೆ ವರ್ಷದವರೆಗೆ ಕಾಯಬೇಕಾಗುತ್ತಿದ್ದುದರಿಂದ ಕಬ್ಬು ತೂಕವನ್ನು ಕಳೆದುಕೊಳ್ಳುತ್ತಿತ್ತು. ಅದರಲ್ಲೂ ಅಲ್ಪಾವಧಿ ತಳಿಗಳ ಪರಿಸ್ಥಿತಿಯಂತೂ ಹೇಳತೀರದು.
- ಒಂದೂವರೆ ವರ್ಷದತನಕ ಕಬ್ಬಿಗೆ ನೀರು ಪೂರೈಕೆ, ಕಳೆ ನಿರ್ವಹಣೆ ಮಾಡಬೇಕಾಗಿತ್ತಲ್ಲದೆ, ಪ್ರಾಣ, ವಿದ್ಯುತ್, ಬೆಂಕಿಯಂಥ ಅಪಾಯಗಳಿಂದ ಅದನ್ನು ಪಾರುಮಾಡಬೇಕಾಗುತ್ತಿತ್ತು.
- ಕಡಿಮೆ ಸಂಖ್ಯೆಯಲ್ಲಿದ್ದ ಹಾಗೂ ಕಡಿಮೆ ಸಾಮರ್ಥ್ಯವಿದ್ದ ಕಾರ್ಖಾನೆಗಳಿಗೆ ಆಕ್ಟೋಬರ್‌ನಿಂದ ಜೂನ್‌ವರೆಗೆ ಸರಾಸರಿ 9 ತಿಂಗಳುಗಳ ಕಾಲ ಕಬ್ಬು ಅರೆದರೂ ಬೆಳೆದು ನಿಂತ ಕಬ್ಬು ಕಟಾವಾಗದೆ ಉಳಿಯುತ್ತಿತ್ತು.
- ರಾಜಕಾಲುವೆಯಲ್ಲಿದ್ದ ಜೌಷ್ಠತೆಯ ಆಧಾರದಲ್ಲಿ ಮತ್ತು ಪಕ್ಕಗೊಂಡ ಕಬ್ಬನ್ನು ಮಾತ್ರ ಅರೆಯಲಾಗುತ್ತಿತ್ತು.
- ಕಟಾವಾದೆ ಉಳಿದ ಕಬ್ಬನ್ನು ರೈತರು ಒಡ್ಡುಗಳಿಗೆ ಮತ್ತು ದನಕರುಗಳಿಗೆ ಕಟಾವು ಮಾಡಿ ಹಾಕುತ್ತಿದ್ದರು.
- ಬೆಲ್ಲದ ಉತ್ಪಾದನೆಯಿಂದಲೂ ಆದಾಯ ಕಡಿಮೆ ಬರುತ್ತಿತ್ತು.



ಕೃಷಿರಂಗ
ಬಸವರಾಜ ಶಿವಪ್ಪ ಗಿರಗಾಂವಿ
vveditoped@gmail.com

- ಕಬ್ಬು ಬೆಳೆಗಾರರು ಹೋರಾಟ ಮಾಡಿ ಕಬ್ಬಿನ ದರ ಪಡೆಯಲು ಹಿಂಜರಿಯುತ್ತಿದ್ದರು.
- ವಿಳಂಬಿತ ಕಬ್ಬು ಕಟಾವಿನಿಂದ ಕಬ್ಬು ಬಿಲ್ ಸಹ ವಿಳಂಬವಾಗಿ ಬರುತ್ತಿತ್ತಲ್ಲದೆ ಕನಿಷ್ಠ ಮೂರು ಹಂತದಲ್ಲಿ ಕಬ್ಬು ದರ ಪಡೆಯಬೇಕಾಗಿತ್ತು.
- ಕಾರ್ಖಾನೆಯಿಂದ ಕಬ್ಬು ಬೀಜ, ರಸಗೊಬ್ಬರ ಪಡೆಯುವುದು ಮತ್ತು ತಮಗಿಷ್ಟವಾದ ಕಾರ್ಖಾನೆಗೆ ಕಬ್ಬು ಪೂರೈಸುವುದು ಅಷ್ಟೊಂದು ಸಲೀಸಾಗಿರಲಿಲ್ಲ.
- ಬಹುತೇಕವಾಗಿ ಕಾರ್ಖಾನೆಗಳಲ್ಲಿ ಕಬ್ಬು ತುಂಬಿದ ವಾಹನಗಳು ಹಲವು ದಿನಗಳವರೆಗೆ ಕಾಯ್ದು ಕಬ್ಬು ಅರೆಯಬೇಕಾಗುತ್ತಿತ್ತು. ಇದರಿಂದ ಕಬ್ಬಿನಲ್ಲಿ ತೂಕ ಮತ್ತು ಸಕ್ಕರೆ ಇಳುವರಿಯು ಕಡಿಮೆಯಾಗುತ್ತಿತ್ತು.
- ಕಬ್ಬು ಬೆಳೆಗಾರರು, ಕಟಾವುದಾರರು ಮತ್ತು ಸಾರಿಗೆದಾರರು ಕಾರ್ಖಾನೆಗಳ ಮಾತನ್ನು ಮೀರುತ್ತಿರಲಿಲ್ಲ.
- ಕಬ್ಬು ಕಟಾವು ಯಂತ್ರಗಳು ಲಭ್ಯವಿರಲಿಲ್ಲ.
- ಕಡು ಬೇಸಿಗೆಯಲ್ಲಿಯೂ ಕಾರ್ಮಿಕರು ಕಬ್ಬು ಕಟಾವು ಮಾಡುತ್ತಿದ್ದುದರಿಂದ ಅತಿಯಾದ ತಾಪಮಾನದಿಂದ ತೊಂದರೆಯಾಗುತ್ತಿತ್ತು.

ಹೀಗೆ ಅಂದಿನ ದಿನಮಾನಗಳಲ್ಲಿ ಕಬ್ಬು ಬೆಳೆಗಾರರು ಅತಿಯಾದ ತೊಂದರೆ ಮತ್ತು ನಷ್ಟವನ್ನು ಅನುಭವಿಸುತ್ತಿದ್ದರು.

ಪ್ರಸಕ್ತ ದಿನಮಾನದಲ್ಲಿ ಬಹುತೇಕವಾಗಿ ಮೇಲಿನ ತೊಂದರೆಗಳಿಲ್ಲ, ಆದರೂ ಕಬ್ಬು ಬೆಳೆಗಾರರು ಹಾನಿ ಅನುಭವಿಸುತ್ತಿದ್ದಾರೆ. ಕಬ್ಬು ಬೆಳೆಗಾರರು ಮಾಡುತ್ತಿರುವ ಕೆಲವು ತಪ್ಪುಗಳನ್ನು ತಿದ್ದಿಕೊಂಡಲ್ಲಿ ಯಾವುದೇ ಹೋರಾಟಗಳಿಲ್ಲದೆ ಸರಳವಾಗಿ ಇನ್ನೂ ಹೆಚ್ಚಿನ ಆದಾಯವನ್ನು ಪಡೆಯಬಹುದಾಗಿದೆ.

- ಕಬ್ಬನೊಂದಿಗೆ ರವದಿ, ಮಣ್ಣು, ಬೇರು, ಎಲೆ, ಎಳೆಕಬ್ಬು ಮತ್ತು ಹಸಿರು ತುದಿ ಪೂರೈಕೆಯಾಗುತ್ತಿರುವುದರಿಂದ ಗುಣಮಟ್ಟದ ಸಕ್ಕರೆಯು ಉತ್ಪಾದನೆಯಾಗುವುದಿಲ್ಲ. ಇದರಿಂದ ಕಾರ್ಖಾನೆಗೆ ಹಾನಿಯಾಗುವುದರಿಂದ ರೈತರಿಗೆ ಕಬ್ಬು ದರವು ಕಡಿಮೆ ಲಭಿಸುತ್ತದೆ. ತಾಜಾ ಮತ್ತು ಗುಣಮಟ್ಟದ (ಪಕ್ವ) ಕಬ್ಬಿನಿಂದ ಹೆಚ್ಚು ಸಕ್ಕರೆ ಮತ್ತು ತೂಕವು ಲಭಿಸುತ್ತದೆ.
- ಪ್ರಸಕ್ತ ಕಬ್ಬು ಕೊರತೆಯ ದಿನಮಾನಗಳಲ್ಲಿ ಕಟಾವುದಾರರಿಗೆ ನಿಗದಿತ ದರಕ್ಕಿಂತ ಹೆಚ್ಚು ಹಣ (ಲಗಾಣಿ) ಕೊಡುವ ಅವಶ್ಯಕತೆಯಿರುವುದಿಲ್ಲ. ಸ್ವಲ್ಪ ಕಾಯಬೇಕಷ್ಟೇ. ದಕ್ಷಿಣ ಕರ್ನಾಟಕದಲ್ಲಿನ ಕಟಾವು ದರಗಳು ಭಯಾನಕವಾಗಿವೆ. ಪ್ರಸ್ತುತ ಕಟಾವುದಾರರಿಗೆ ಉಳಿಯುವಷ್ಟು ಹಣವು ನೂರಾರು ಕೋಟಿ ಹಣ ಹೂಡಿದ ಕಾರ್ಖಾನೆದಾರರಿಗೆ ಮತ್ತು ಲಕ್ಷಾಂತರ ಹಣ ಖರ್ಚು ಮಾಡಿ ಕಬ್ಬು ಬೆಳೆಸುತ್ತಿರುವ ರೈತನಿಗೂ ಉಳಿಯುತ್ತಿಲ್ಲ. ಇದನ್ನು ಇತಿಮಿತಿಯೊಂದಿಗೆ ಸಾಮೂಹಿಕವಾಗಿ ಕೈಗೊಳ್ಳುವುದು ಕಡ್ಡಾಯ. ಕಾರ್ಮಿಕರ ಕೊರತೆಯ ದಿನಮಾನಗಳಲ್ಲಿ ಯೋಗ್ಯ ಕೂಲಿ ದೊರೆಯದಿದ್ದಲ್ಲಿ ಕಾರ್ಮಿಕರು ಬೇರೆ ಉದ್ಯೋಗದತ್ತ ವಲಸೆ ಹೋಗುವ ಅಪಾಯವಿರುತ್ತದೆ ಎಂಬ ಗಮನವಿರಬೇಕಷ್ಟೆ.
- ಸದ್ಯ ಅವಧಿಪೂರ್ವ ಅಂದರೆ ಗ್ಲೂಕೋಜ್ (ಪಕ್ವಪೂರ್ವ) ಹಂತದಲ್ಲಿ ಕಬ್ಬು ಕಟಾವು ಮಾಡುತ್ತಿರುವುದು ಜೋರಾಗಿದೆ, ಇದರಿಂದ ಕಬ್ಬಿನ ತೂಕ ಕಡಿಮೆಯಾಗುತ್ತದೆ. ಕಬ್ಬನ್ನು ಪಕ್ವಗೊಂಡ ನಂತರ ಅಂದರೆ ಸುಕ್ರೋಸ್ ಹಂತದಲ್ಲಿ ಕಟಾವು ಮಾಡುವುದರಿಂದ ಹೆಚ್ಚಿನ ತೂಕವು ಲಭಿಸುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಅವಧಿಪೂರ್ವ/ಪಕ್ವಪೂರ್ವ ಕಬ್ಬು ಕಟಾವು ರೈತರಿಗೆ ಮತ್ತು ಕಾರ್ಖಾನೆಗಳಿಗೆ ಮಾರಕವಾಗಿವೆ. ಮನುಷ್ಯರಿಗೆ ತಿನ್ನಲು ಯೋಗ್ಯವಿರುವ ಕಬ್ಬಿನಿಂದ ಮಾತ್ರ ಗುಣಮಟ್ಟದ ಸಕ್ಕರೆ, ಎಥೆನಾಲ್ ಉತ್ಪಾದನೆಯಾಗುತ್ತದೆ.
- ಸದ್ಯದ ಕಬ್ಬು ಕಟಾವಿನ ಸರಾಸರಿ ಅವಧಿಯು ಕೇವಲ 9 ತಿಂಗಳಾಗಿದೆ. ಅಲ್ಪಾವಧಿ ತಳಿಗಳನ್ನು ಸೂಕ್ತ ಸಮಯದಲ್ಲಿ ನಾಟಿ ಮಾಡಿ ಮತ್ತು ಸಮರ್ಪಕ ನಿರ್ವಹಣೆ ಮಾಡಿ ಸರಾಸರಿ 12 ತಿಂಗಳಿಗೆ ಕಾರ್ಖಾನೆಗೆ ಪೂರೈಸಿದಲ್ಲಿ ಹೆಕ್ಟೇರಿಗೆ ನಿಗದಿತ ತೂಕಕ್ಕಿಂತ ಸರಾಸರಿ 15 ಟನ್ ಹೆಚ್ಚಿಗೆ ತೂಕವನ್ನು ಪಡೆಯಬಹುದಾಗಿದೆ.
- ಉಪಗ್ರಹ, ಡ್ರೋನ್, ಕೃಶ ಬುದ್ಧಿಮತ್ತೆ ಹಾಗೂ ಜಿಪಿಎಸ್ ಆಧಾರಿತ ಕಬ್ಬು ಕೃಷಿ ನಿರ್ವಹಣೆಯಿಂದ ಅನಗತ್ಯ ಖರ್ಚುಗಳನ್ನು ನಿಯಂತ್ರಿಸಬಹುದು. ಇದು ಕಡಿಮೆ ಕ್ಷೇತ್ರದಲ್ಲಿ ಕಡಿಮೆ ಖರ್ಚಿನೊಂದಿಗೆ ಹೆಚ್ಚು ಇಳುವರಿ ಪಡೆಯುವ ಆಧುನಿಕ ಪದ್ಧತಿಯಾಗಿದೆ.
- ಅಲ್ಪಾವಧಿ ತಳಿಯ ಕಬ್ಬನ್ನು ನಾಟಿ ಮಾಡುವುದರಿಂದ ಕಾರ್ಖಾನೆಗೆ ಹೆಚ್ಚು ಆದಾಯವಾಗುತ್ತದೆ. ಇದರಿಂದ ರೈತರಿಗೂ ಹೆಚ್ಚಿನ ಪಾಲು ಲಭಿಸುತ್ತದೆ. ಅಲ್ಪಾವಧಿ ಕಬ್ಬು ತಳಿಗಳು ವಿಶೇಷವಾಗಿ ಸುಂಕ (ಮುಳ್ಳು)ಗಳನ್ನು ಹೊಂದಿರುವುದರಿಂದ ರೈತರು ನಾಟಿ ಮಾಡಲು ಹಿಂಜರಿಯುತ್ತಾರೆ. ಸದ್ಯ ಯಾಂತ್ರೀಕೃತ ಕಟಾವು ಸಾಧ್ಯವಿರುವುದರಿಂದ ಅಲ್ಪಾವಧಿ ತಳಿಗಳ ಕಟಾವಿಗೆ ಸಮಸ್ಯೆಯಾಗುವುದಿಲ್ಲ.
- ಕಬ್ಬು ನಾಟಿ ಮಾಡುವ ಸಮಯವು ವಿಶೇಷವಾಗಿ ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಇರುತ್ತದೆ. ಈ ಅವಧಿಯಲ್ಲಿ ವಾತಾವರಣವು ಹೆಚ್ಚು ಆರ್ದ್ರತೆಯನ್ನು ಹೊಂದಿರುವುದರಿಂದ ಬೀಜವು ಹೆಚ್ಚಿನ ಪ್ರಮಾಣದಲ್ಲಿ ಮೊಳಕೆಯೊಡೆಯುತ್ತದೆ.
- ಸದ್ಯ ಕಾರ್ಖಾನೆಗಳು ಕಬ್ಬು ಕೊರತೆಯಿಂದ 200ರಿಂದ 250 ದಿನಗಳ ಬದಲಾಗಿ ಸರಾಸರಿ 120 ದಿನಗಳು ಮಾತ್ರ ಕಬ್ಬು ಅರೆಯುತ್ತಿವೆ. ಕಡು ಬೇಸಗೆಯ ಪೂರ್ವದಲ್ಲಿಯೇ ಕಾರ್ಖಾನೆಗಳು ಸಂಪೂರ್ಣ ಕಬ್ಬು ಅರೆದು ಮುಗಿಸುತ್ತಿವೆ. ಇಂಥ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಕಬ್ಬು ಕಟಾವು ಮಾಡಲು ರೈತರು ಆಸಕ್ತರಾಗುವ ಅವಶ್ಯಕತೆಯಿರುವುದಿಲ್ಲ.
- ಸದ್ಯ ಕಾರ್ಖಾನೆಗಳು ಹೆಚ್ಚಾಗಿದ್ದು ಹಿಂದಿನಂತೆ ಕಬ್ಬು ಕಟಾವಾಗದೆ ಉಳಿಯುವ ಭಯವಿಲ್ಲ. ಆದ್ದರಿಂದ ರೈತರು ಸಮೀಪದ ಕಾರ್ಖಾನೆಗಳಿಗೆ ಕಬ್ಬು ಪೂರೈಸಬೇಕು. ಇದರಿಂದ ಸಾಗಾಣಿಕೆ ವೆಚ್ಚವನ್ನು ಉಳಿಸಿ ಹೆಚ್ಚಿನ ಲಾಭ ಪಡೆಯಬಹುದು.

ಬೆಳೆಗಾರರು ಈ ಕ್ರಮಗಳನ್ನು ಅಳವಡಿಸಿಕೊಂಡಲ್ಲಿ ಕಬ್ಬು ಬೆಳೆಯಿಂದ ಮತ್ತಷ್ಟು ಆದಾಯವನ್ನು ಪಡೆಯಬಹುದಾಗಿದೆ.

(ಲೇಖಕರು ಕೃಷಿ ತಜ್ಞರು ಹಾಗೂ ಸಹಾಯಕ ಮಹಾ ಪ್ರಬಂಧಕರು).

12-08-2025
Vishvavani Pg.07